# ಮಕ್ಕಳ ವರ್ತನೆಯನ್ನು ಕುರಿತ ಪರ್ಯಾಲೋಚನೆ

- **ಶಿಪ್ರಾ ಅಗರವಾಲ್**

ನಾನು ದಿನೇಶ್‌ಪುರದ (ಉತ್ತರಾಖಂಡ) ಅಜೀಂ ಪ್ರೇಮ್‌ಜಿ ಶಾಲೆಯಲ್ಲಿ ಶಿಕ್ಷಕಿಯಾಗಿ ೨೦೧೨ರಿಂದ ದುಡಿಯುತ್ತಿದ್ದೇನೆ ಹಾಗೂ ವರ್ತನೆಯನ್ನು ಕುರಿತು ತರಗತಿಯಲ್ಲಿ ನಿರಂತರವಾಗಿ ಮಾತನಾಡುತ್ತಾ ಬಂದಿದ್ದೇನೆ. ಸದ್ಯಕ್ಕೆ ನಾನು ನಾಲ್ಕನೇ ತರಗತಿಯ ತರಗತಿ ಶಿಕ್ಷಕಿಯಾಗಿದ್ದೇನೆ. ಶಿಕ್ಷಕರ ಅನುಪಸ್ಥಿತಿಯಲ್ಲಿ ಐದು ಮಂದಿ ಮಕ್ಕಳು ಇತರರಿಗೆ ಬೈಯ್ಯುತ್ತಾರೆ ಹಾಗೂ ಒಂದೇ ರೀತಿಯ ದುರ್ವರ್ತನೆಯನ್ನು ತೋರುತ್ತಾರೆ. ಇದರಿಂದಾಗಿ ಹೊಡೆದಾಟವೂ ನಡೆಯುತ್ತದೆ. ಹೀಗಾಗಿ ತರಗತಿಯನ್ನು ನಡೆಸುವಾಗ ಸಮಸ್ಯೆಗಳು ಎದುರಾಗುತ್ತವೆ ಹಾಗೂ ತರಗತಿ ಕೋಣೆಯಲ್ಲಿನ ಬೋಧನೆಗೆ ಅಡಚಣೆಯುಂಟಾಗುತ್ತದೆ. ಈ ಸಮಸ್ಯೆಗಳನ್ನು ಬಗೆಹರಿಸುವುದಕ್ಕಾಗಿ ಕೆಲವೊಮ್ಮೆ ಸಾಕಷ್ಟು ಸಮಯವನ್ನು ಕಳೆಯಲಾಗುತ್ತದೆ.

## ವಿಷಯ ಅಧ್ಯಯನ

ತಮ್ಮ ವರ್ತನೆ ಹಾಗೂ ಸಂಭಾಷಣೆಯಲ್ಲಿ ವಿಪರೀತವಾಗಿ ಬೈಗುಳದ ಮಾತುಗಳನ್ನಾಡುವ ಐದು ಮಕ್ಕಳ ಜೊತೆ ವ್ಯವಹರಿಸಲು ನಾನು ಯೋಚಿಸಿದೆ. ಸಾಮಾನ್ಯವಾಗಿ ಈ ರೀತಿ ನಂಬಲಾಗಿದೆ ಹಾಗೂ ಹೇಳಲಾಗಿದೆ:

• ದೈಹಿಕ ಶಿಕ್ಷೆಯು ಮಕ್ಕಳನ್ನು ನಿಯಂತ್ರಿಸುವುದಕ್ಕಾಗಿ ಇರುವ ಸುಲಭದ ದಾರಿಯಾಗಿದೆ. ಆದರೆ ಅವರ ಗಮನವನ್ನು ಅವರ ದೈಹಿಕ ನೋವಿಗೆ ರ್‍ವಾಯಿಸುವ ಕಾರಣ ಇದು ಅವರ ಅಧ್ಯಯನದ ಮೇಲೆ ಋಣಾತ್ಮಕ ಪರಿಣಾಮ ಬೀರಬಹುದು. ಅಲ್ಲದೆ ಅವರು ನನ್ನನ್ನು ಕುರಿತು ಭಯಪಡಬಹುದು ಎಂದು ಸಹ ನಾನು ಭಾವಿಸಿದೆ.

• ಇನ್ನೊಂದು ಯೋಚನೆಯು ಅವರು ತರಗತಿಯನ್ನು ಬಿಡುವಂತೆ ಹೇಳುವುದು. ಆದರೆ ಇದು ಸಹ ಅವರ ಅಧ್ಯಯನವನ್ನು ಬಾಧಿಸಲಿದೆ ಹಾಗೂ ಅವರು ತರಗತಿಯ ಹೊರಗಿರುವುದನ್ನು ಆನಂದಿಸುವ ಸಾಧ್ಯತೆ ಇದೆ. ಅಲ್ಲದೆ ಸಮಸ್ಯೆಯ ನಿಯಂತ್ರಣಕ್ಕಿಂತಲೂ ಅದು ಉಲ್ಬಣಗೊಳ್ಳುವ ಸಾಧ್ಯತೆ ಇದೆ ಎಂಬುದನ್ನು ನಾನು ಮನಗಂಡೆ.

• ಅನಂತರ ಅವರ ಪೋಷಕರನ್ನು ಕರೆದು ಅವರೊಂದಿಗೆ ಮಾತನಾಡಲು ನಿರ್ಧರಿಸಿದೆ. ಇದರಿಂದಾಗಿ ವಿದ್ಯಾರ್ಥಿಗಳು ನಿರಂತರವಾಗಿ ತರಗತಿಯಲ್ಲಿ ಹಾಜರಾಗಲು ಸಾಧ್ಯವಾಗುತ್ತದೆ ಅಥವಾ ಕನಿಷ್ಠ ಪಕ್ಷ ಅವರು ಯಾವುದೇ ಭೀತಿಯಿಲ್ಲದೆ ಶಾಲೆಗೆ ಬರುವುದು ಸಾಧ್ಯವಾಗುತ್ತದೆ.

ಅಂತಿಮವಾಗಿ ತರಗತಿ ಮುಗಿದ ಅನಂತರ ಆ ಮಕ್ಕಳೊಂದಿಗೆ ಪ್ರತ್ಯೇಕವಾಗಿ ಮಾತನಾಡಲು ನಾನು ನರ್ಧರಿಸಿದೆ.

**ಕಾರ್ಯಯೋಜನೆ:** ಸಮಸ್ಯೆಯನ್ನು ತಗ್ಗಿಸುವ ಉದ್ದೇಶದಿಂದ ತರಗತಿ ಮುಗಿದ ಅನಂತರವೇ ಆ ಐದು ವಿದ್ಯಾರ್ಥಿಗಳ ಜೊತೆ ಮಾತನಾಡಲು ನಾನು ನಿರ್ಧರಿಸಿದೆ. ಏಕೆಂದರೆ ಇದು ಅವರ ಅಧ್ಯಯನದ ಮೇಲೆ ಯಾವುದೇ ಪರಿಣಾಮ ಬೀರದು ಎನ್ನುವುದು ನನ್ನ ಅನಿಸಿಕೆಯಾಗಿತ್ತು.

ಪ್ರಕ್ರಿಯೆ: ನಾನು ಅವರೊಂದಿಗೆ ಸಾಮಾನ್ಯ ವಿಷಯಗಳನ್ನು ಕುರಿತು ಮಾತನಾಡಲು ಪ್ರಾರಂಭಿಸಿದೆ. ಅವರು ಶಾಲೆಯಲ್ಲಿ ಏನು ಮಾಡಿದರು ಎಂಬುದಾಗಿ ಅವರಲ್ಲಿ ನಾನು ಕೇಳಿದೆ. ಪ್ರತಿಯೊಬ್ಬರೂ ಬೇರೆ ಬೇರೆ ಉತ್ತರಗಳನ್ನು ನೀಡಿದರು.

ತಾವು ಅಧ್ಯಯನ ಮಾಡಿದ್ದಾಗಿ ಒಬ್ಬಾತ ಹೇಳಿದ.

ತಾವು ಆಟವಾಡಿದ್ದಾಗಿ ಇನ್ನೊಬ್ಬ ಹೇಳಿದ.

ತಾವು ಆಹಾರ ಸೇವಿಸಿದ್ದಾಗಿ ಮಗದೊಬ್ಬ ಹೇಳಿದ.

ಅನಂತರ, ಶಾಲೆಯಲ್ಲಿ ಅವರು ಯಾವುದನ್ನು ಮಾಡಲು ಇಷ್ಟಪಡುತ್ತಾರೆ ಎಂದು ನಾನು ಅವರಲ್ಲಿ ಕೇಳಿದೆ. ತಾವು ಆಟವಾಡುವುದನ್ನು ಹೆಚ್ಚು ಇಷ್ಟಪಡುವುದಾಗಿ ಅವರು ಏಕಕಾಲದಲ್ಲಿ ಉತ್ತರ ನೀಡಿದರು.

ಯಾರಾದರೂ ಅವರಿಗೆ ನಿಂದನೀಯ ಭಾಷೆಯನ್ನು ಬಳಸಿದ್ದಾರೆಯೇ ಎಂದು ಕೇಳಿದೆ.

ನಾನಿದನ್ನು ಕೇಳಿದ ತತ್‌ಕ್ಷಣವೇ ತಮ್ಮ ಅನುಭವಗಳನ್ನು ಹಂಚಿಕೊಳ್ಳಲು ಅವರು ಪ್ರಾರಂಭಿಸಿದರು.

ಅವರಲ್ಲಿ ಒಬ್ಬ, ತನಗೆ ಪ್ರಿಯಾ ನಿಂದನೀಯ ಭಾಷೆಯನ್ನು ಬಳಸುತ್ತಾಳೆ ಎಂದು ಹೇಳಿದ.

ಇನ್ನೊಬ್ಬಾತ, ಅನೇಕ ಮಕ್ಕಳು ತನ್ನನ್ನು ವಿರೂಪಗೊಳಿಸಿದ ಹೆಸರಿನಿಂದ ಕರೆಯುತ್ತಾರೆ ಎಂದು ಹೇಳಿದ.

ಅವರೂ ಸಹ ಅದೇ ರೀತಿಯಲ್ಲಿ ಪ್ರತಿಕ್ರಿಯಿಸಿದ್ದಾರೆಯೇ ಎನ್ನುವ ನನ್ನ ಪ್ರಶ್ನೆಗೆ, ಎಲ್ಲರೂ 'ಹೌದು' ಎಂದು ಉತ್ತರಿಸಿದರು. ಅಂತಹ ಸಂದರ್ಭದಲ್ಲಿ ಸುಮ್ಮನಿದ್ದು ಯಾವುದೇ ಪ್ರತಿಯುತ್ತರ ನೀಡದೆ ಇರಬಹುದೇ ಎಂದು ಕೇಳಿದಾಗ ಅವರು ಮತ್ತೆ 'ಹೌದು' ಎಂದು ಉತ್ತರಿಸಿದರು.

ಶಾಲೆಗೆ ಪಾಠವನ್ನು ಕಲಿಯುವುದಕ್ಕೆ ಮಾತ್ರವಲ್ಲದೆ ಹೇಗೆ ರಿ್ತಸಬೇಕು ಎಂಬುದನ್ನು ಸಹ ಕಲಿಯಲು ಹಾಗೂ ಇಂತಹ ಇತರ ಒಳ್ಳೆಯ ವಿಚಾರಗಳನ್ನು ಮೈಗೂಡಿಸಿಕೊಳ್ಳಲು ನಾವು ಶಾಲೆಗೆ ಬರುತ್ತೇವೆ ಎಂದು ನಾನು ಹೇಳಿದೆ. ನಾನು ಅವರಿಗೆ ಇನ್ನೊಂದು ವಿಷಯವನ್ನು ಕೇಳಿದೆ, 'ಒಂದು ವೇಳೆ ಇತರರು ಬಳಸಿದ ನಿಂದನೀಯ ಭಾಷೆಗೆ ನಾವು ಪ್ರತಿಕ್ರಿಯೆ ನೀಡದೆ ಇದ್ದರೆ ಜಗಳ ಕಡಮೆಯಾಗಬಹುದೇ?' ಎಲ್ಲರೂ 'ಹೌದು' ಎಂದು ಪ್ರತಿಕ್ರಿಯಿಸಿದರು. ಯಾರೂ ಬೈಗುಳ ಕೇಳುವುದನ್ನು ಇಷ್ಟಪಡುವುದಿಲ್ಲ ಹಾಗೂ ಆ ಸಂರ್ಭದಲ್ಲಿ ಸುಮ್ಮನಿರುವುದು ಸುಲಭದ ಮಾತಲ್ಲ. ಆದರೆ ನಿಮಗೆ ಈ ರೀತಿ ಸುಮ್ಮನಿರಲು ಸಾಧ್ಯವೇ ಎಂದು ನಾನು ಕೇಳಿದೆ. ಎಲ್ಲರೂ ಧನಾತ್ಮಕವಾಗಿ ಪ್ರತಿಕ್ರಿಯಿಸಿದರು. ಅಲ್ಲದೆ ಮರುದಿನ ಎಷ್ಟು ಮಕ್ಕಳು ತಮ್ಮ ವಿರುದ್ಧ ಬಳಸಿದ ಅಂತಹ ಭಾಷೆಗೆ ಪ್ರತಿಕ್ರಿಯಿಸದೆ ಇರುತ್ತಾರೆ ಎಂದು ನಾಳೆ ನೋಡೋಣ ಎಂದು ನಾನು ಹೇಳಿದೆ.

ಮುಂದಿನ ದಿನ ಮಕ್ಕಳು ತಮ್ಮ ಅನುಭವಗಳನ್ನು ಹಂಚಿಕೊಂಡರು. 'ನನ್ನನ್ನು ನಿಂದಿಸಲಾಯಿತು. ಆದರೆ ನಾನು ಸುಮ್ಮನಿದ್ದೆ ಹಾಗೂ ನೇರವಾಗಿ ಮನೆಗೆ ಹೋದೆ' ಎಂದು ಒಬ್ಬ ಹೇಳಿದ. 'ನಾನು ಆಟವಾಡಲು ಹೋದಾಗ ನನಗೆ ನಿಂದನೆಯ ಭಾಷೆಯನ್ನು ಬಳಸಲಾಯಿತು. ಆದರೆ ನಾನು ಸುಮ್ಮನಾದೆ' ಎಂದು ಇನ್ನೊಬ್ಬ ಹೇಳಿದ. ಯಾರಾದರೂ ತಾವಾಗಿಯೇ ನಿಂದನೆಯ ಭಾಷೆಯನ್ನು ಬಳಸಿದ್ದಾರೆಯೇ ಎಂದು ನಾನು ಕೇಳಿದಾಗ ಅವರು ಈ ವಿಚಾರದಲ್ಲಿ ಪರಸ್ಪರ ದೂಷಿಸಲು ಪ್ರಾರಂಭಿಸಿದರು. ಈ ಸಂದರ್ಭದಲ್ಲಿ, ಇತರರನ್ನು ಕುರಿತು ಮಾತನಾಡದೆ ತಮ್ಮ ಕುರಿತು ಮಾತ್ರವೇ ಮಾತನಾಡಲು ನಾನು ಅವರಿಗೆ ಹೇಳಿದೆ. ಆಗ, ಕೆಲವೊಮ್ಮೆ ತಾವು ಆ ರೀತಿ ಮಾಡಿರುವುದಾಗಿ ಅವರು ಒಪ್ಪಿಕೊಂಡರು. ಈ ಕುರಿತು ಎಚ್ಚರಿಕೆ ವಹಿಸಲು ಹಾಗೂ ಅಂತಹ ಭಾಷೆಯನ್ನು ಬಳಸದಿರಲು ನಾನು ಅವರಿಗೆ ಹೇಳಿದೆ. ಈ ಕುರಿತು ಎಚ್ಚರಿಕೆ ವಹಿಸುವುದಾಗಿ ಅವರು ಭರವಸೆ ನೀಡಿದರು.

ಎರಡು ಸಾವಿರದ ಹದಿನಾರರ ನವೆಂಬರ್ ಐದರಂದು ಮಕ್ಕಳು ದೀಪಾವಳಿ ರಜೆಯ ಅನಂತರ ಶಾಲೆಗೆ ಮರಳಿದರು. ಐವರಲ್ಲಿ ಮೂವರು ತರಗತಿಯಲ್ಲಿ ಹಾಜರಿದ್ದರು. ನಾನು ಅವರೊಂದಿಗೆ ಪ್ರತ್ಯೇಕವಾಗಿ ಮಾತನಾಡಿದೆ.

ತಮ್ಮ ರಜಾ ದಿನಗಳನ್ನು ಹೇಗೆ ಕಳೆದರೆಂದು ನಾನು ಅವರನ್ನು ಕೇಳಿದೆ. ಅವರಿಗೆ ನಿರಾಳವೆನಿಸುವ ರೀತಿಯಲ್ಲಿ, ನಾನು ನನ್ನ ಸಂಭಾಷಣೆಯನ್ನು ಪ್ರಾರಂಭಿಸಿದೆ. ಎಲ್ಲರೂ ತಮ್ಮ ಅನುಭವಗಳನ್ನು ಹಂಚಿಕೊಂಡರು ಹಾಗೂ ಅನಂತರ ನಮ್ಮ ಮುಂದಿದ್ದ ವಿಚಾರದ ಕುರಿತು ಮಾತನಾಡಿದೆವು. ತಾವು ನಿಂದನೆಯ ಭಾಷೆಯನ್ನು ಬಳಸುವುದಿಲ್ಲ ಮಾತ್ರವಲ್ಲದೆ ಯಾರಾದರೂ ಈ ರೀತಿಯ ಭಾಷೆಯನ್ನು ಬಳಸಿದರೆ ಪ್ರತಿಕ್ರಿಯಿಸುವುದಿಲ್ಲ ಎಂಬುದಾಗಿ ಅವರೆಲ್ಲರೂ ಒಪ್ಪಿಕೊಂಡರು. ತರಗತಿಯಲ್ಲಿ ಮಾತನಾಡಲು ತಮ್ಮ ಸರದಿ ಬರುವ ತನಕ ಅವರು ಕಾಯುತ್ತಾರೆಯೇ ಎಂದು ಕೇಳಿದಾಗ, ತಾವು ಈ ರೀತಿ

ಮಾಡಲು ಯತ್ನಿಸುತ್ತೇವೆ, ಆದರೆ ಮರೆತು ಬಿಡುತ್ತೇವೆ ಎಂದು ಹೇಳಿದ ಅವರು ತಮ್ಮ ವೈಫಲ್ಯವನ್ನು ವ್ಯಕ್ತಪಡಿಸಿದರು. ನಿರಂತರವಾಗಿ ಇದನ್ನು ಗಮನದಲ್ಲಿಟ್ಟುಕೊಂಡರೆ ಇದು ಅಭ್ಯಾಸವಾಗುತ್ತದೆ ಎಂದು ನಾನು ಹೇಳಿದೆ.

ಈ ರೀತಿ ಮಾಡಲು ಯತ್ನಿಸುವುದಾಗಿ ಅವರೆಲ್ಲರೂ ಭರವಸೆ ನೀಡಿದರು. ಆದರೆ ಅವರ ರ್ತನೆಯಲ್ಲಿನ್ನೂ ಯಾವುದೇ ಬದಲಾವಣೆ ಕಂಡುಬರಲಿಲ್ಲ. ಅವರು ನನ್ನೊಂದಿಗೆ ಸಲೀಸಾಗಿ ಹಾಗೂ ಸರಿಯಾದ ರೀತಿಯಲ್ಲಿ ಮಾತನಾಡುತ್ತಿದ್ದರು. ಆದರೆ ಬೇರೆ ಸಂದರ್ಭಗಳಲ್ಲಿ ಇದು ಕಾಣಸಿಗುತ್ತಿರಲಿಲ್ಲ. ಉದಾಹರಣೆಗೆ, ಸಮುದಾಯ ಭೇಟಿಯ ವೇಳೆ ನಾನು ರಾಜ್ ಕುಮಾರ್ (ಹೆಸರನ್ನು ಬದಲಾಯಿಸಲಾಗಿದೆ) ಮನೆಗೆ ಹೋದಾಗ ಆತನು ಮಾತನಾಡಿದ ರೀತಿ ನನಗೆ ಇಷ್ಟವಾಗಲಿಲ್ಲ. ಯಾವ ರೀತಿ ಮಾತನಾಡಬೇಕು ಎಂಬುದನ್ನು ನಾನು ಮಕ್ಕಳಿಗೆ ತಿಳಿ ಹೇಳಿದೆ. ಹಿರಿಯರು ಮತ್ತು ಸಹಪಾಠಿಗಳೊಂದಿಗೆ ಮಾತನಾಡುವಾಗ ಮಾತಿನ ಧಾಟಿ ಹೇಗಿರಬೇಕು ಎನ್ನುವುದನ್ನು ಕುರಿತು ಅವರೆಲ್ಲರೂ ಒಪ್ಪಿಕೊಂಡರು.

ವರ್ತನೆಯಲ್ಲಿ ಬದಲಾವಣೆ ತರುವುದು ಸುಲಭದ ಕೆಲಸವಲ್ಲ. ಇದಕ್ಕಾಗಿ ನಿರಂತರ ಸಂವಾದದ ಅಗತ್ಯವಿದೆ ಹಾಗೂ ಇದು ಸಾಧ್ಯವಾಗಬೇಕಾದರೆ ಸೂಕ್ತ ವಾತಾವರಣವನ್ನು ಸೃಷ್ಟಿಸುವ ಅಗತ್ಯವೂ ಇದೆ. ಅಗತ್ಯ ವಾತಾವರಣವನ್ನು ಒದಗಿಸುವುದು ನಮ್ಮ ಕೈಯಲ್ಲಿಲ್ಲದಿರಬಹುದು. ಅದು ಸಮುದಾಯ ಮತ್ತು ಸಹಪಾಠಿಗಳನ್ನು ಹೆಚ್ಚು ಅವಲಂಬಿಸಿರುತ್ತದೆ. ಆದರೆ ಸಾಧ್ಯವಿರುವ ಮಟ್ಟಿಗೆ ಸಂವಾದದ ಮೂಲಕ ನಾನಿದನ್ನು ಯತ್ನಿಸುತ್ತೇನೆ.

ತದನಂತರ ನಾನು ರಿಪೋರ್ಟ್ ಕಾರ್ಡುಗಳ ತಯಾರಿಯಲ್ಲಿ ನಿರತಳಾದ ಕಾರಣ ಅವರೊಂದಿಗೆ ಮಾತನಾಡಲು ಆಗಲಿಲ್ಲ. ಅವರ ವರ್ತನೆ ಮತ್ತೆ ಹಿಂದಿನಂತಾಗಿತ್ತು ಹಾಗೂ ಇದು ನನ್ನನ್ನು ಚಿಂತೆಗೀಡು ಮಾಡಿತ್ತು. ಸಮಯ ಸಿಕ್ಕಾಗಲೆಲ್ಲ (ಊಟದ ವಿರಾಮದ ವೇಳೆ ಅಥವಾ ಇತರ ಸಮಯದಲ್ಲಿ) ಅವರೊಂದಿಗೆ ಮಾತನಾಡಬೇಕು  ನಾನು ಅವರೊಂದಿಗೆ ಮಾತನಾಡುವುದನ್ನು ನಿಲ್ಲಿಸಬಾರದು ಎಂದು ನಾನು ಯೋಚಿಸಿದೆ.

ಡಿಸೆಂಬರ್ ೧೫, ೨೦೧೬ - ನಾನು ಕಮಲ್, ರಾಜ್ ಕುಮಾರ್, ವಿಕಾಸ್, ಕವಿತಾ ಮತ್ತು ಪ್ರೇಮಾ (ಎಲ್ಲವೂ ಕಾಲ್ಪನಿಕ ಹೆಸರುಗಳು) ಅವರನ್ನು ಕರೆದೆ. ನನ್ನ ಹೆಚ್ಚಿನ ಸಮಯವು ಅವರು ಹೇಳಿದ್ದನ್ನು ಕೇಳುವುದರಲ್ಲಿ ಕಳೆಯಿತು. ಇದು ಸರಿಯಾದುದೇ ಆಗಿತ್ತು. ಏಕೆಂದರೆ ಕನಿಷ್ಠಪಕ್ಷ ಮಕ್ಕಳು ಹೇಳಬೇಕೆಂದಿರುವುದನ್ನು ಹೇಳಲು ಅವರಿಗೆ ಅವಕಾಶ ದೊರೆಯಿತು. ಆದರೆ ಅವರ ಹೆಚ್ಚಿನ ಮಾತುಕತೆಯು ಇತರರನ್ನು ಕುರಿತ ದೂರಿಗೆ ಸಂಬಂಧಿಸಿತ್ತು. ಅಲ್ಲದೆ ಅವು, ಅವರು ಈಗಾಗಲೇ ಪ್ರತಿಕ್ರಿಯಿಸಿದ ದೂರಗಳಾಗಿದ್ದವು ಎಂಬುದು ನನಗೆ ತಿಳಿಯಿತು. ಉದಾಹರಣೆಗೆ, ಇಂತಹ ವಿದ್ಯಾರ್ಥಿಯು ಇಂತಹವರಿಗೆ ಹೀಗೆ ಹೇಳಿದ, ಹೀಗಾಗಿ ಇದಕ್ಕೆ ಪ್ರತಿಯಾಗಿ ಆತ/ಕೆ ಈ ರೀತಿ ಹೇಳಿದನು/ಳು - ಇತ್ಯಾದಿ

ವಿಷಯಗಳು. ನಾನು ಅವರಿಗೆ ಇಷ್ಟನ್ನು ಮಾತ್ರವೇ ಮಾಡಲು ಹೇಳಿದೆ - ಈ ರೀತಿ ಪ್ರತಿಕ್ರಿಯೆ ನೀಡುವ ಬದಲಾಗಿ ಅಂತಹ ನಿರ್ದಿಷ್ಟ ಘಟನೆ ಸಂಭವಿಸಿದ ದಿನಾಂಕವನ್ನು ಅವರು ಬರೆದಿಡಬೇಕು. ಅಲ್ಲದೆ ನಾವು ಮಾತುಕತೆ ನಡೆಸುವಾಗ ಅವರ ಬಗ್ಗೆ ಮಾತ್ರವೇ ಅವರು ಹೇಳಬೇಕೇ ಹೊರತು ಇತರರನ್ನು ಕುರಿತಲ್ಲ. ಅವರು ಇತರರೊಂದಿಗೆ ಹೇಗೆ ವರ್ತಿಸಿದರು ಎಂಬುದನ್ನಷ್ಟೇ ಹೇಳಬೇಕು. ಈಗ, ಅವರ ವರ್ತನೆಯಲ್ಲಿ ಬದಲಾವಣೆ ಉಂಟಾಗಿರುವುದನ್ನು ನಾವು ಗಮನಿಸಬಹುದಾಗಿತ್ತು. ಆದರೆ ಅವರೊಂದಿಗೆ ಸಂವಾದ ನಡೆಸುವಾಗ ಮಾತ್ರವೇ ಇದು ಗೋಚರಿಸುತ್ತಿತ್ತು. ಸಂವಾದ ನಿಂತ ಕೂಡಲೇ ಅವರು ತಮ್ಮ ವರ್ತನೆಯ ಹಿಂದಿನ ಮಾದರಿಗೆ ಮರಳುತ್ತಿದ್ದರು.

ಮಕ್ಕಳ ವರ್ತನೆಯನ್ನು ಕುರಿತು ೨೦೧೭ರ ಜನವರಿ ೧೮ರಂದು ಸಹೋದ್ಯೋಗಿ ಶಿಕ್ಷಕರೊಂದಿಗೆ ನಡೆದ ಸಭೆಯಲ್ಲಿ, ಈ ಹಿಂದೆ ಇಂಗ್ಲಿಷ್‌ನಲ್ಲಿ ಒಂದು ಪದವನ್ನು ಸಹ ಓದಲು ಹಿಂಜರಿಯುತ್ತಿದ್ದ ರಾಜ್ ಕುಮಾರ್ (ಕಾಲ್ಪನಿಕ ಹೆಸರು) ಈಗ ಇಂಗ್ಲಿಷ್‌ನಲ್ಲಿ ಓದಲು ಪುಸ್ತಕವನ್ನು ಕೇಳುತ್ತಾನೆ ಎನ್ನುವ ವಿಷಯ ನನಗೆ ತಿಳಿದು ಬಂತು. ಅವನಲ್ಲಿ ಈ ರೀತಿಯ ಬದಲಾವಣೆ ಹೇಗೆ ಉಂಟಾಯಿತು ಎಂಬುದು ಯಾರಿಗೂ ತಿಳಿದಿರಲಿಲ್ಲ. ಆದರೆ ಈ ಬದಲಾವಣೆಯನ್ನು ಎಲ್ಲರೂ ಗಮನಿಸಬಹುದಾಗಿತ್ತು. ಇನ್ನೊಬ್ಬ ಶಿಕ್ಷಕರು ಕವಿತಾಳ (ಕಾಲ್ಪನಿಕ ಹೆಸರು) ಕುರಿತು ಈ ರೀತಿ ಹೇಳಿದರು: ಅವಳು ಈ ಹಿಂದೆ ಆಟವಾಡಲು ಹಿಂಜರಿಯುತ್ತಿದ್ದಳು. ಆದರೆ ಈಗ ನಾಯಕತ್ವದ ಪಾತ್ರವನ್ನು ವಹಿಸಲು ಮುಂದೆ ಬರುತ್ತಾಳೆ. ಕ್ರೀಡಾ ದಿನಾಚರಣೆಯಂದು ಆಕೆ ಫುಟ್ಬಾಲ್ ತಂಡವನ್ನು ಮುನ್ನಡೆಸಿದ್ದು ಮಾತ್ರವಲ್ಲದೆ ತನ್ನ ತಂಡಕ್ಕೆ ಗೆಲುವನ್ನೂ ತಂದುಕೊಟ್ಟಳು. ಅವಳು ಮಾತನಾಡುವ ರೀತಿಯಲ್ಲಿಯೂ ಬದಲಾವಣೆ ಉಂಟಾಗಿತ್ತು.

ಅನೇಕ ದಿನಗಳ ಅನಂತರ ೨೦೧೭ರ ಜನವರಿ ೨೫ರಂದು ನಾನು ಈ ಮಕ್ಕಳನ್ನು ಭೇಟಿಯಾಗಲು ಸಾಧ್ಯವಾಯಿತು. ಮೊದಲಿಗೆ ಚಳಿಗಾಲದ ರಜೆ, ತದನಂತರ ಜಿಲ್ಲಾ ಮ್ಯಾಜಿಸ್ಟ್ರೇಟ್ ಘೋಷಿಸಿದ ವಿರಾಮ ಹಾಗೂ ವೈಯಕ್ತಿಕ ಕಾರಣಗಳಿಗಾಗಿ ಎರಡು ದಿನಗಳ ರಜೆ ತೆಗೆದುಕೊಳ್ಳಲಾಗಿತ್ತು. ಹೀಗಾಗಿ ಮಕ್ಕಳೊಂದಿಗೆ ಮಾತನಾಡಲು ನಿರ್ಧರಿಸಿದೆ. ಆದರೆ ಎಲ್ಲ ಅವಧಿಗಳಲ್ಲಿ ಬೋಧನೆಯಲ್ಲಿ ನಿರತಳಾಗಿದ್ದೆ ಹಾಗೂ ಊಟದ ವಿರಾಮದ ವೇಳೆ ಇತರ ಜವಾಬ್ದಾರಿಗಳನ್ನು ನಿಭಾಯಿಸಬೇಕಿತ್ತು.

ನನ್ನ ಸಮಸ್ಯೆಯನ್ನು ಕುರಿತು ಶಾಲಾ ಮುಖ್ಯಸ್ಥರಿಗೆ ತಿಳಿಸಿದೆ. ನಾನು ಮಕ್ಕಳೊಂದಿಗೆ ಊಟಮಾಡುವಂತೆ ನನಗೆ ಸಲಹೆ ನೀಡಲಾಯಿತು. ಹೀಗೆ ಮುಂದಿನ ದಿನ ನಾನು ಊಟದ ವೇಳೆ ಅವರೊಂದಿಗೆ ಮಾತನಾಡಿದೆ. ತದನಂತರ ನಾನು ಮುಖ್ಯ ಶಿಕ್ಷಕರನ್ನು ಭೇಟಿಯಾದಾಗ, ಮಕ್ಕಳೊಂದಿಗೆ ಅನೌಪಚಾರಿಕವಾಗಿ ಮಾತನಾಡಲು ಅವರು ಸಲಹೆ ನೀಡಿದರು. ಏಕೆಂದರೆ ಆಗ ಮಾತ್ರವೇ ಶಿಕ್ಷಕ-ವಿದ್ಯಾರ್ಥಿ ಸಂಬಂಧದಲ್ಲಿ ಅಂತರ್ಗತವಾಗಿರುವ

ಶ್ರೇಣೀಕರಣವಿಲ್ಲದೆ ಹಾಗೂ ಅಂಜಿಕೆ ಇಲ್ಲದೆ ಮಕ್ಕಳು ಮಾತನಾಡುತ್ತಾರೆ. ಆದರೆ ನನ್ನ ಅನುಭವವು ಭಿನ್ನವಾಗಿತ್ತು. ಅವರೊಂದಿಗೆ ಪ್ರತ್ಯೇಕವಾಗಿ ಕುಳಿತುಕೊಂಡು ಮಾತನಾಡಿದರೆ ಒಳ್ಳೆಯದು ಎಂದು ನಾನು ಭಾವಿಸಿದ್ದೆ. ಮಕ್ಕಳ ಪಾಲಿಗೆ ಯಾವುದು ಅನುಕೂಲಕರ ಎಂದು ಅವರು ಮಾತ್ರವೇ ಹೇಳಬಹುದಾದರೂ ನನ್ನ ಪಾಲಿಗೆ ಇದೇ ಅನುಕೂಲಕರವಾಗಿತ್ತು.

ಮುಂದಿನ ದಿನ ಮಕ್ಕಳ ಅಭಿಪ್ರಾಯಗಳನ್ನು ತಿಳಿದುಕೊಳ್ಳಲು ನಾನು ಯತ್ನಿಸಿದೆ. ಆದರೆ ಅವರಲ್ಲಿ ಮೂವರು ಮಾತ್ರವೇ ಹಾಜರಾಗಿದ್ದರು. ಪ್ರತಿಯೊಬ್ಬರು ಭಿನ್ನ ಅಭಿಪ್ರಾಯಗಳನ್ನು ಹೊಂದಿದ್ದರು. ಒಬ್ಬಾತ ಮಧ್ಯಾಹ್ನದ ಊಟದ ವೇಳೆ ಮಾತನಾಡಲು ಇಷ್ಟಪಟ್ಟರೆ, ಇನ್ನೊಬ್ಬನು ನಾವು ಈ ಹಿಂದೆ ಕುಳಿತು ಮಾತನಾಡುತ್ತಿದ್ದ ಸ್ಥಳದಲ್ಲಿಯೇ ಮಾತನಾಡಲು ಇಷ್ಟಪಟ್ಟ. ಆದರೆ ಮೂರನೆಯವನು ಮಾತ್ರ ಎಲ್ಲಿ ಬೇಕಾದರೂ ಕುಳಿತುಕೊಳ್ಳಬಹುದು ಎಂದು ಹೇಳಿದ.

ನಾನು ಅವರೊಂದಿಗೆ ಪ್ರತ್ಯೇಕವಾಗಿ ಕುಳಿತು ಮಾತನಾಡಲು ಇಚ್ಛಿಸಿದೆ. ಏಕೆಂದರೆ ಆಗ ಯಾವುದೇ ಅಡಚಣೆ ಇರುವುದಿಲ್ಲ. ಹೊರಗಡೆ ಯಾವಾಗಲೂ ಗಮನಹರಣವಿರುತ್ತದೆ ಹಾಗೂ ನಾನು ಅವರ ಗಮನವನ್ನು ಮತ್ತೆ ಸೆಳೆಯಬೇಕಾಗುತ್ತದೆ. ಆದರೂ ನಾವು ಹೊರಗಡೆಯೇ ಕುಳಿತುಕೊಂಡೆವು. ಇದೊಂದು ಒಳ್ಳೆಯ ಅನುಭವವಾಗಿ ಮೂಡಿ ಬರಲಿಲ್ಲ. ಏಕೆಂದರೆ ಆಗಾಗ್ಗೆ ಅಡಚಣೆಗಳು ಕಂಡುಬಂದವು ಹಾಗೂ ಸಂಭಾಷಣೆಯ ಕೊಂಡಿಯಲ್ಲಿ ಏರುಪೇರು ಕಾಣಿಸಿಕೊಂಡಿತು. ಹೀಗಾಗಿ ಮುಂದಿನ ದಿನ ನಾವು ಪ್ರತ್ಯೇಕ ಕೋಣೆಯಲ್ಲಿ ಕುಳಿತುಕೊಂಡೆವು. ಐವರು ವಿದ್ಯಾರ್ಥಿಗಳಲ್ಲಿ ನಾಲ್ವರು ಉಪಸ್ಥಿತರಿದ್ದರು. ಅಲ್ಲಿಯೂ ಏಕಾಗ್ರತೆಯನ್ನು ಸಾಧಿಸಲು ಅವರು ವಿಫಲರಾದರು. ಗಮನವನ್ನು ಕೇಂದ್ರಿಕರಿಸಲು ನಾನು ಅವರನ್ನು ವಿನಂತಿಸಬೇಕಾಯಿತು.

ಎರಡು ಸಾವಿರದ ಹದಿನೇಳರ ಫೆಬ್ರುವರಿ ನಾಲ್ಕರಂದು ನಾನು ಅವರೊಂದಿಗೆ ಮತ್ತೊಮ್ಮೆ ಮಾತನಾಡಿದೆ. ಇತರರ ಮುಂದೆ ಮಾತನಾಡಲು ತಮಗೆ ಸರಿಯಾಗುವುದಿಲ್ಲ ಹಾಗೂ ಪ್ರತ್ಯೇಕ ಸ್ಥಳದಲ್ಲಿ ತಾವು ಮಾತನಾಡಲು ಇಚ್ಛಿಸುವುದಾಗಿ ಅವರು ನನಗೆ ಹೇಳಿದರು. ಅಸೆಂಬ್ಲಿಯ ವೇಳೆ ಐದನೇ ತರಗತಿಯ ನಾರಾಯಣ್ ತನ್ನ ಹೆಸರನ್ನು ತಿರುಚಿ ಕರೆಯುತ್ತಾನೆ. ಆದರೆ ತಾನು ಮಾತ್ರ ಪ್ರತಿಕ್ರಿಯಿಸಿಲ್ಲ ಎಂದು ತುಷಾರ್ ಹೇಳಿದ. ಆತ ಮಾಡಿದ್ದು ಸರಿಯಾಗಿಯೇ ಇದೆ ಎಂದು ನಾನು ಆತನಿಗೆ ಹೇಳಿದೆ. ಅಲ್ಲದೆ ಈ ವಿಷಯವನ್ನು ತರಗತಿಯ ಶಿಕ್ಷಕರಿಗೆ ತಿಳಿಸಲು ಹೇಳಿದೆ. ಏಕೆಂದರೆ ಅವರು ಈ ಕುರಿತು ನಾರಾಯಣ್ ಜೊತೆ ಮಾತನಾಡುತ್ತಾರೆ. ನಾಲ್ಕನೇ ತರಗತಿಯ ಕೃಷ್ಣಾಳಿಗೆ ಆತ ಪ್ರತಿಕ್ರಿಯಿಸಿದ ಕಾರಣ, ಜಗಳವು ಬಿಗಡಾಯಿಸಿ, ಇಬ್ಬರೂ ಪರಸ್ಪರ ಹೊಡೆದಾಡಿದ್ದಲ್ಲದೆ, ಆಕೆಯ ಪಾದಕ್ಕೆ ಗಾಯವಾಯಿತು ಎಂದು

ನಾನು ಆತನಿಗೆ ನೆನಪಿಸಿದೆ. ಒಂದಷ್ಟು ಮಾತುಕತೆಯ ಅನಂತರ ಎಲ್ಲರೂ ತರಗತಿಗೆ ಮರಳಿದರು.

## ತೀರ್ಮಾನ

ಸೆಶನ್‌ನ ಕೊನೆಯ ತನಕ ಈ ಮಕ್ಕಳ ವರ್ತನೆಯ ಕುರಿತು ನಾನು ನಿರಂತರವಾಗಿ ತೊಡಗಿಸಿಕೊಂಡಿದ್ದೆ. ಅವರ ವರ್ತನೆಯಲ್ಲಿ ಸಾಕಷ್ಟು ಬದಲಾವಣೆ ಉಂಟಾಗಿರುವುದನ್ನು ಅನೇಕ ಬಾರಿ ಗಮನಿಸಬಹುದು. ಆದರೂ ಈ ಕುರಿತು ಅವರೊಂದಿಗೆ ಇನ್ನಷ್ಟು ತೊಡಗಿಸಿಕೊಳ್ಳಬೇಕಾದ ಅಗತ್ಯವಿದೆ.

ಶಿಕ್ಷಣ ಕ್ಷೇತ್ರದಲ್ಲಿ ೧೯೯೭ರಿಂದ ಕೆಲಸ ಮಾಡುತ್ತಿರುವ ಶಿಪ್ರಾ ಅವರು ಪ್ರಸ್ತುತ ಉಧಮ್‌ಸಿಂಗ್ ನಗರದ ದಿನೇಶಪುರದ ಅಜೀಂ ಪ್ರೇಮ್‌ಜಿ ಶಾಲೆಯಲ್ಲಿ ಶಿಕ್ಷಕರಾಗಿದ್ದಾರೆ. ಅವರನ್ನು shipra.agarwal@azimpremjifoundation.org ಮೂಲಕ ಸಂರ್ಪಿಸಬಹುದು.